passed by the Legislative Assembly during the current Session and transmitted to the Legislative Council have been passed by the Legislative Council without any amendments or recommendation :

1. The Mysore Beedi Industrial Premises (Regulation of Conditions of Work) Bill, 1964
2. The Mysore Sales Tax (Amendment) Bill, 1964
3. The Mysore Agricultural Income-Tax (Amendment) Bill, 1964.

Members' Representation.

Sri S. SIVAPPA (Sravanabelgola).—Sir, before taking up the next business on the agenda, I have to make a representation. I have just received one express telegram from Chitradurga Raiyat Sangha :

ಮಾನ್ಯ ಸಭಾಪತಿಗಳೇ, ನಾನು ಈಗ ಈ ಮಾನ್ಯ ಸಭೆಯ ಗಮನಕ್ಕೆ ಒಂದು ಗಹನವಾದ ವಿಚಾರವನ್ನು ತರಬೇಕಾಗಿದೆ. ಅದೇನೆಂದರೆ—ಚಿತ್ರದುರ್ಗ ಜಿಲ್ಲೆಯಲ್ಲಿ ಜನರು ಜಿಲ್ಲಾಧಿಕಾರಿಗಳಲ್ಲಿ ಹೋಗಿ ತಿನ್ನುವುದಕ್ಕೆ ಅನ್ನವಿಲ್ಲ, ಅನ್ನ ಕೊಡಿ, ಕೆಲಸ ಕೊಡಿ ಎಂದು ಕೇಳುವುದಕ್ಕೆ ಹೋದರೆ ಅವರು ಅವರಿಗೆ ಅನ್ನಕ್ಕೆ ಮಾರ್ಗ ಕೊಡತಕ್ಕ ಯಾವುದಾದರೂ ಕೆಲಸ ಕಾರ್ಯಗಳನ್ನು ಕ್ಷಾಮ ನಿವಾರಣಾರ್ಥವಾಗಿ ಕೈಗೊಳ್ಳುವುದಕ್ಕೆ ಬದಲಾಗಿ ಅವರು ಜನರ ಮೇಲೆ ಲಾಠಿ ಛಾರ್ಜ್ ಮಾಡಿಸಲು ಹೇಳಿ ಜನರನ್ನು ಹೆದರಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆಂದು ನನಗೆ ಅಲ್ಲಿಂದ ತಂತಿ ಬಂದಿದೆ. ತಾವು ಈ ವಿಚಾರವನ್ನು ಸರ್ಕಾರದವರ ಪರಾಂಬರಿಕೆಗೆ ತರಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. (ತಂತೀ ಪತ್ರವನ್ನು ಅಧ್ಯಕ್ಷರಿಗೆ ಒಪ್ಪಿಸಿದರು).

Mr. SPEAKER.—I am receiving it, subject to the condition that he is satisfied about it.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ನನಗೂ ಅದೇ ರೀತಿಯಾಗಿ ಅಲ್ಲಿಂದಫೋನ್ ಮೆಸೇಜ್ ಬಂದಿದೆ. ಕೇವಲ ಯಾವುದೋ ಒಂದು ತಾಲ್ಲೂಕಿನಲ್ಲಿ ಮಾತ್ರ ನಾಲ್ಕು ಕಾಂಗಾರಿಗಳನ್ನು ಇಲ್ಲಿಯವರೆಗೆ ಪ್ರಾರಂಭ ಮಾಡಿದ್ದಾರಂತೆ. ಆ ದಿವಸ ಇಲ್ಲಿ ಸರ್ಕಾರದವರು.....

Mr. SPEAKER.—If there are so many representations it becomes embarassing.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮಿ, ಅಧ್ಯಕ್ಷರೇ, ತಾವು ಕಳೆದ ಶನಿವಾರ ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಕ್ಷಾಮದ ಪರಿಸ್ಥಿತಿ ಯಾವ ರೀತಿಯಿದೆಯೆಂಬುದನ್ನು ಪರಿಶೀಲಿಸುವುದಕ್ಕಾಗಿ ಬಂದಿದ್ದಾರೇನೋ ಎಂದು ನಾನು ತಮ್ಮನ್ನು ಕಾಣಲು ಪ್ರವಾಸಿ ಮಂದಿರಕ್ಕೆ ಬಂದೆನು. ಆದರೆ ತಾವು ಅಷ್ಟರೊಳಗೆ ಹೊರಟು ಹೋಗಿದ್ದಿರಿ. ಅಲ್ಲಿಯೂ ಕ್ಷಾಮದ ಪರಿಸ್ಥಿತಿ ಬಹಳ ಪ್ರಬಲವಾಗಿದೆ.....

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ನಮ್ಮ ತುಮಕೂರು ಜಿಲ್ಲೆಯಲ್ಲಿ ಇಲ್ಲಿಯವರೆಗಾದರೂ ಸರ್ಕಾರದವರು ಯಾವ ಪರಿಹಾರ ಕಾರ್ಯಕ್ರಮಗಳನ್ನೂ ಕೈಗೊಂಡಿಲ್ಲ. ಅಲ್ಲಿ ಜನರು ಅಭಾವದಿಂದ ಕಂಗೆಟ್ಟು ಹೋಗಿದ್ದಾರೆ. ತಾವು ಮುಖ್ಯಮಂತ್ರಿಗಳಿಗೆ ಈ ವಿಚಾರವನ್ನು ತಿಳಿಸಬೇಕು.

Mr. SPEAKER.—I am not going to allow any such representations hereafter. He has said that already.

Sri S. NIJALINGAPPA (Chief Minister).—I will look into it.